ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

26

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 12/12/20

ಏಮಾನದವರು ಎಂದು ನಾಸಾ ಹೇಳಿದೆ.

# ಪ್ರಣಬ್ ಪುಸ್ತಕದಲ್ಲಿ ಕೈ ವೈಫಲ್ಯ ಚಿತ್ರಣ

ನವದೆಹಲಿ: ಕಾಂಗ್ರೆಸ್ ಪಕ್ಷದ ದುಃಸ್ಥಿತಿ ಬಗ್ಗೆ ಸ್ವಪಕ್ಷೀಯ ಧುರೀಣರು ಆಕ್ಷೇಪ ಎತ್ತಿರುವಾಗಲೇ, ಇತ್ತ ಅಪ್ರಕಟಿತ ಪ್ರಣಬ್ ಮುಖರ್ಜಿ ಅವರ ಆತ್ಮಚರಿತ್ರೆ ಕೂಡ 'ಕೈ' ಪಕ್ಷದ ವೈಫಲ್ಯಗಳನ್ನು ಎತ್ತಿತೋರಿಸಿದೆ.



'ದಿ ಪ್ರೆಸಿಡೆನ್ಷಿಯಲ್ ಇಯರ್ಸ್–2012–17' ಆತ್ಮಚರಿತ್ರೆಯಲ್ಲಿ ಕಾಂಗ್ರೆಸ್‌ನ ಅವನತಿ ಬಗ್ಗೆ ದಿ.ಪ್ರಣಬ್ ಮುಖರ್ಜಿ ವಿವರಿಸಿದ್ದಾರೆ. 'ಕಾಂಗ್ರೆಸ್‌ನ ಕಾರ್ಯವೈಖರಿ ನಿರ್ವಹಿಸಲು ಸೋನಿಯಾ ಗಾಂಧಿ ಅಸಮರ್ಥರಾಗಿದ್ದರು. ಡಾ. ಮನ ಮೋಹನ ಸಿಂಗ್ ಮೈತ್ರಿಕೂಟ ಉಳಿಸಿಕೊಳ್ಳಲು ದೀರ್ಘಕಾಲ ಸದನಕ್ಕೆ ಗೈರಾಗುತ್ತಿದ್ದರು. ಪಕ್ಷದ ಮುಖಂಡರು, ಸಂಸದರ ಸಂಪರ್ಕಕ್ಕೂ ಅವರೂ ಸಿಗದೆ, ಭಾರೀ ಬೆಲೆ ತೆರಬೇಕಾಯಿತು' ಎಂದು ಬರೆದಿದ್ದಾರೆ.

'ಪ್ರಧಾನಿ ಮೋದಿ ಅವರು ತಮ್ಮ ಮೊದಲ ಅವಧಿಯ ಕಟ್ಟುನಿಟ್ಟಿನ ಆಡಳಿತ, ನಿರಂಕುಶ ಹಾದಿಯಲ್ಲಿ ಸಾಗಿದಂತೆ ತೋರುತ್ತಿತ್ತು' ಎಂದೂ ವಿಶ್ಲೇಷಿಸಿದ್ದಾರೆ. ಪ್ರಣಬ್‌ರ ಆತ್ಮಚರಿತ್ರೆ 2021ರ ಜನವರಿಯಲ್ಲಿ ಓದುಗರ ಕೈಸೇರಲಿದೆ.